ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ, ದ.ಕ.

# C.C 411/2024

ಫಿರ್ಯಾದುದಾರರು: (ಕರ್ನಾಟಕ ಸರ್ಕಾರದ ಪರವಾಗಿ)
ಬೆಳ್ತಂಗಡಿ ಪೊಲೀಸ್ ಠಾಣೆ

ವಿರುದ್ಧ

ಆರೋಪಿ: ಮೇದಪ್ಪಗೌಡ @ ಸದಾಶಿವ,
ಬಿನ್ ದಿ.ಕುಶಾಲಪ್ಪಗೌಡ ,
ಪ್ರಾಯಃ 36 ವರ್ಷ,
ವಾಸಃ ಬೊಳ್ಳಾಜೆಹೊಸ ಮನೆ ,
ಕಿಲ್ಲೂರು ಮಿತ್ತಬಾಗಿಲು ಗ್ರಾಮ ,
ಬೆಳ್ತಂಗಡಿ ತಾಲೂಕು,

## ದೋಷಾರೋಪಣೆ

ಸಂದೇಶ.ಕೆ ಎಂಎ. ಎಲ್.ಎಲ್.ಬಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಬೆಳ್ತಂಗಡಿ ಆದ ನಾನು ಮೇಲ್ಕಂಡ ಆರೋಪಿಗಳಾದ ನಿಮ್ಮನ್ನು ಈ ಕೆಳಕಂಡಂತೆ ಅಪಾದನೆಗುರಿಪಡಿಸುತ್ತೇನೆ.

ಮೊದಲನೆಯದಾಗಿ, ದಿನಾಂಕ 18-10-2023 ರಂದು ಬೆಳಿಗ್ಗೆ 8.00 ಗಂಟೆ ಸಮಯದಲ್ಲಿ ಬೆಳ್ತಂಗಡಿ ತಾಲೂಕು, ಬೆಳ್ತಂಗಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಮಿತ್ತಬಾಗಿಲು ಗ್ರಾಮದ ಬೊಳ್ಳಾಜೆ ಎಂಬಲ್ಲಿ ಚಾಸಾ-2 ಓಬಯ್ಯ ಪೂಜಾರಿ ರವರ ಮನೆ ಹತ್ತಿರ ಚಾಸಾ-1 -ಮೋಹನ್ ರವರು ಚಾಸಾ-2 ರವರ ಜೊತೆ ಮಾತನಾಡುತ್ತಿರುವ ಸಮಯ ಆರೋಪಿಯಾದ ನೀವು ಅಲ್ಲಿಗೆ ಏಕಾಏಕಿಯಾಗಿ ಬಂದು ಚಾಸಾ-1 ರವರನ್ನು ಉದ್ದೇಶಿಸಿ "ಬೇವರ್ಸಿ ರಂಡೆ ಮನ ನಿನನ್ ದೀಪುಜಿ" (ಬೇವರ್ಸಿ ರಂಡೆಮನ ನಿನ್ನನ್ನು ಇಡುವುದಿಲ್ಲ) ಎಂದು ಅವಾಚ್ಯ ಶಬ್ದಗಳಿಂದ ಬೈದು, ಆ ಮೂಲಕ ಅವರಿಗೆ ಉದ್ರೇಕವನ್ನುಂಟು ಮಾಡಿದರೆ ಅಂಥ ಉದ್ರೇಕದಿಂದ ಅವರು ಕುಪಿತರಾಗಿ ಶಾಂತಿ ಭಂಗವನ್ನು ಉಂಟು ಮಾಡಲೆಂಬ ಅಥವಾ ಯಾವುದೇ ಅಪರಾಧವನ್ನು ಮಾಡಬೇಕೆಂಬ ಉದ್ದೇಶದಿಂದ ಅವರನ್ನು ಅವಮಾನ ಪಡಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಸ್ವ-ಇಚ್ಛೆಯಿಂದ ಅಲ್ಲಿಯೇ ಬೇಲಿಯಲ್ಲಿದ್ದ ಮಾರಕಾಯುಧವಾದ ದೊಣ್ಣೆಯನ್ನು ತೆಗೆದುಕೊಂಡು ಚಾಸಾ-1 ರವರ ಬಲಕೋಲು ಕೈಗೆ, ತಟ್ಟಿಗೆ, ಎಡಕಾಲಿನ ಮಣಿಗಂಟಿಗೆ ಹಲ್ಲೆ ಮಾಡಿದ ಪರಿಣಾಮ ಸಾಮಾನ್ಯ ಸ್ವರೂಪದ ಗಾಯ ಉಂಟಾಗಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ-324 ರಡಿಯಲ್ಲಿ ದಂಡನೀಯವಾದ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಮೂರನೆಯದಾಗಿ ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಸ್ವಇಚ್ಛೆಯಿಂದ ಕೈಯಿಂದ ಚಾಸಾ-1 ರವರ ಮುಖಕ್ಕೆ ಹಲ್ಲೆ ನಡೆಸಿ ಚಾಸಾ-1 ರವರ ಎಡಕಣ್ಣಿನ ಬಳಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ರಡಿಯಲ್ಲಿ ದಂಡನೀಯವಾದ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಕೊನೆಯದಾಗಿ ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ-1 ರವರನ್ನು ಉದ್ದೇಶಿಸಿ ಜೀವ ಬೆದರಿಕೆ ಹಾಕಿದ್ದು, ಅವರು ಹೆದರುವಂತೆ ಮಾಡಿ ಕಾನೂನು ಸಮ್ಮತವಾಗಿ ಮಾಡಬೇಕಾಗಿರುವ ಕೃತ್ಯವನ್ನು ಮಾಡದಂತೆ ಅಥವಾ ಕಾನೂನು ಸಮ್ಮತವಾಗಿ ಮಾಡಬಾರದ ಕೃತ್ಯವನ್ನು ಮಾಡುವಂತೆ ಅಪಾಯದ ಭೀತಿಯನ್ನು ಹುಟ್ಟಿಸಿ ಅಪರಾಧಿಕ ಭಯೋತ್ಪಾದನೆಯನ್ನು ಉಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಮತ್ತು ಸದರಿ ಅಪರಾಧಗಳ ವಿಚಾರಣೆಯು ಈ ನ್ಯಾಯಾಲಯದಲ್ಲಿ ನಡೆಯುವಂತೆ ನಿರ್ದೇಶಿಸುತ್ತೇನೆ.

(ಸಂದೇಶ.ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು. ಬೆಳ್ತಂಗಡಿ

1. ಮೇಲೆ ಹೇಳಿದಂತೆ ನಿಮಗೆ ಓದಿ ಹೇಳಿ ವಿವರಿಸಿದ ದೋಷರೋಪಣೆಯನ್ನು ಅರ್ಥಮಾಡಿಕೊಂಡಿರುವಿರಾ?

ಉತ್ತರಃ

2. ಅಪರಾಧವನ್ನು ಒಪ್ಪಿಕೊಳ್ಳುವಿರಾ ಅಥವಾ ಆರೋಪ ವಿಚಾರಣೆಯಾಗಬೇಕೆ?

ಉತ್ತರಃ

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗಳಿಗೆ ದಿನಾಂಕಃ **30.06.2025** ರಂದು ತಿಳಿದ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅವು ಸರಿಯಾಗಿರುತ್ತದೆಯೆಂದು ಈ ಮೂಲಕ ದೃಢೀಕರಿಸಿದೆ).

**(ಸಂದೇಶ.ಕೆ.)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**.** ಬೆಳ್ತಂಗಡಿ